ವಿಷಯ : ಆರಕ್ಷಕ ಇಲಾಖೆಯ ಬೆರಳಚ್ಚು ವಿಭಾಗವನ್ನು ಸಮ್ಮಿಲನಗೊಳಿಸುವ ಬಗ್ಗೆ.

ಪ್ರ. 132 (79) ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಆರಕ್ಷಕ ಇಲಾಖೆಯ ಬೆರಳಚ್ಚು ವಿಭಾಗವನ್ನು ಆರಕ್ಷಕ ಮುಖ್ಯದಳದೊಂದಿಗೆ ಸಮ್ಮಿಲನಗೊಳಿಸಲು ಸಿದ್ಧಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸಲಹೆ ಮಾಡಿದೆಯೆ ;

(ಆ) ಸರ್ಕಾರವು ಈ ಬಗ್ಗೆ ಇಲ್ಲಿಯವರೆಗೆ ಕೈಗೊಂಡ ಕ್ರಮವೇನು ;

(ಇ) ಈ ಎರಡೂ ದಳಗಳನ್ನು ಸಮ್ಮಿಲನಗೊಳಿಸದಿದ್ದರೆ, ಬೆರಳಚ್ಚು ವಿಭಾಗದ ಬಹಳಷ್ಟು ಸಿಬ್ಬಂದಿ ವರ್ಗವು ಯಾವುದೇ ಬಡ್ತಿ ಸೌಲಭ್ಯ ಪಡೆಯದೇ ನಿವೃತ್ತರಾಗುತ್ತಾರೆಂಬುದು ಸರಿಯೆ ;

(ಈ) ಹಾಗಿದ್ದಲ್ಲಿ, ನೇಮಕಾತಿ ಹೊಂದಿದ ಮುದ್ದೆಯಲ್ಲಿಯೇ ನಿವೃತ್ತಿ ಹೊಂದುವ ನೌಕರರಷ್ಟು ;

(ಉ) ಈ ನ್ಯೂನತೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮಾನ್ಯ ಮುಖ್ಯ ಮಂತ್ರಿಗಳು) :—

(ಅ) ಹೌದು.

(ಆ) ಈ ಸಲಹೆಯನ್ನು ಕೂಲಂಕುಶವಾಗಿ ಪರಿಶೀಲಿಸಿದರೀ ಬೆರಳಚ್ಚು ವಿಭಾಗವು ಬೇರೆಯಾಗಿಯೇ ಇರಬೇಕೆಂದು ತೀರ್ಮಾನಿಸಲಾಯಿತು.

(ಇ) ಈಗಿರುವ ವ್ಯವಸ್ಥೆಯಲ್ಲಿ ಬಡ್ತಿಗೆ ಅವಕಾಶ ಇದೆ.

(ಈ) ಮೇಲಿನ ಉತ್ತರದಿಂದ ಈ ಸಮಸ್ಯೆ ಉದ್ಭವಿಸುವುದಿಲ್ಲ.

(ಉ) ಮೇಲಿನಂತೆ.

ವಿಷಯ : ಕೊಡಗು ಜಿಲ್ಲಾ ಆಸ್ಪತ್ರೆಗಳಿಗೆ ಆಹಾರ ಒದಗಿಸುವ ಬಗ್ಗೆ.

ಪ್ರ. 133 (122) ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕೊಡಗು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಗೆ ಆಹಾರವನ್ನು ಒದಗಿಸಲಾಗುತ್ತಿದೆಯೇ ? ಮತ್ತು ಈ ಉದ್ದೇಶಕ್ಕಾಗಿ ಒಂದು ವರ್ಷಕ್ಕೆ ವಿಚ್ರ್ ಮಾಡಲಾದ ಹಣವೆಷ್ಟು ;

(ಆ) ಕೊಡಗು ಜಿಲ್ಲೆಯಲ್ಲಿ ಆಹಾರವನ್ನು ಒದಗಿಸುತ್ತಿರುವ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಹೆಸರುಗಳು ;

(ಇ) ಕೊಡಗು ಜಿಲ್ಲೆಯಲ್ಲಿ ಆಹಾರವನ್ನು ಒದಗಿಸಲಾಗದಿರುವ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಹೆಸರುಗಳು ;

(ಈ) ಆಹಾರವನ್ನು ಒದಗಿಸದಿರಲು ಕಾರಣಗಳೇನು ;

(ಉ) ಕೊಡಗು ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಆಹಾರವನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು) .—

(ಅ) 9 ಸರ್ಕಾರಿ ಆಸ್ಪತ್ರೆಗಳ ಒಳರೋಗಿಗಳಿಗೆ ಆಹಾರವನ್ನು ಒದಗಿಸಲಾಗುತ್ತಿದೆ. ಈ ಬಗ್ಗೆ 1982–83ರಲ್ಲಿ 99,683 ರೂ.ಗಳನ್ನು ವಿಚ್ರ್ ಮಾಡಲಾಯಿತು.

(ಆ) ಆಹಾರವನ್ನು ಒದಗಿಸುತ್ತಿರುವ ಸರ್ಕಾರಿ ಆಸ್ಪತ್ರೆಗಳ ಹೆಸರುಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ 1 ರಲ್ಲಿ ಕೊಡಲಾಗಿದೆ.

(ಇ) ಆಹಾರವನ್ನು ಒದಗಿಸದೇ ಇರುವ ಸರ್ಕಾರಿ ಆಸ್ಪತ್ರೆಗಳ ಹೆಸರುಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ 2 ರಲ್ಲಿ ತೋರಿಸಲಾಗಿದೆ.

(ಈ) ಆಹಾರವನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲು ಸಾಕಷ್ಟು ಪ್ರಚಾರ ಮಾಡಿಗುತ್ತಿಗೆದಾರರನ್ನು ಹಾಗೂ ಸ್ಥಳೀಯ ಸಹಕಾರಿ ಸಂಘಗಳನ್ನೆ ಕೋರಿದಾಗ್ಯೂ ಸಹ ಆಹಾರವನ್ನೊದಗಿಸಲು ಯಾರೂ ಮುಂದೆ ಬಂದಿಲ್ಲ.

(ಉ) ಆಸ್ಪತ್ರೆಗಳಲ್ಲಿ ಆಹಾರವನ್ನು ಸರಬರಾಜು ಮಾಡಲು ಯೋಗ್ಯವಾದ ಆಹಾರ ಸರಬರಾಜು ಗಾರರಿಗೆ ಆಕರ್ಷಕವಾಗುವ ರೀತಿಯಲ್ಲಿ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಕೊಟ್ಟು ಹೊಸ ಪ್ರಯತ್ನ ಮಾಡಲಾಗುತ್ತದೆ. ಸರ್ಕಾರಿ ನೌಕರರನ್ನು ಈ ಕೆಲಸಕ್ಕೆ ನೇಮಿಸಿ, ಅಡುಗೆಯ ಮನೆಗಳನ್ನು ಪ್ರಾರಂಭಿಸುವ ಬಗ್ಗೆಯೂ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಯತ್ನ ಮಾಡಲಾಗುತ್ತಿದೆ.

ಅನುಬಂಧ 1

1.	ಜಿಲ್ಲಾ ಆಸ್ಪತ್ರೆ	ಮಡಕೇರಿ
2.	ಸಾರ್ವಜನಿಕ ಆಸ್ಪತ್ರೆ	ವೀರಾಜಪೇಟೆ
3.	ಸಾರ್ವಜನಿಕ ಆಸ್ಪತ್ರೆ	ಸೋಮವಾರಪೇಟೆ
4.	ಸಿವಿಲ್ ಆಸ್ಪತ್ರೆ	ಕುಶಾಲನಗರ
5.	ಸಿವಿಲ್ ಆಸ್ಪತ್ರೆ	ಕೂಡ್ಲಿಪೇಟೆ
6.	ಸಿವಿಲ್ ಆಸ್ಪತ್ರೆ	ಸಿದ್ದಾಪುರ
7.	ಸಿವಿಲ್ ಆಸ್ಪತ್ರೆ	ಮುರ್ನಾಡು
8.	ಸಿವಿಲ್ ಆಸ್ಪತ್ರೆ	ಗೋಣಿಕೊಪ್ಪಲು
9.	ಪ್ರಾಥಮಿಕ ಆರೋಗ್ಯ ಕೇಂದ್ರ	ಶನಿವಾರ ಸಂತೆ

ಅನುಬಂಧ 2

1.	ಸಾರ್ವಜನಿಕ ಆಸ್ಪತ್ರೆ	ಹೆಬ್ಬಾಳೆ
2.	ಸಾರ್ವಜನಿಕ ಆಸ್ಪತ್ರೆ	ಮದಾಪುರ
3.	ಸಾರ್ವಜನಿಕ ಆಸ್ಪತ್ರೆ	ಶಾಂತಹಳ್ಳಿ
4.	ಸಾರ್ವಜನಿಕ ಆಸ್ಪತ್ರೆ	ಬೆಟ್ಟಹಳ್ಳಿ
5.	ಸಾರ್ವಜನಿಕ ಆಸ್ಪತ್ರೆ	ಪೊಳ್ಳಿಬೆಟ್ಟ
6.	ಸಾರ್ವಜನಿಕ ಆಸ್ಪತ್ರೆ	ತಿಥಿಮತಿ
7.	ಪ್ರಾಥಮಿಕ ಆರೋಗ್ಯ ಕೇಂದ್ರ	ಶುಂಠಿಕೊಪ್ಪ
8.	ಪ್ರಾಥಮಿಕ ಆರೋಗ್ಯ ಕೇಂದ್ರ	ಬಾಳೆಲೆ
9.	ಸಾರ್ವಜನಿಕ ಆಸ್ಪತ್ರೆ	ಮ್ಯಿನಾದ್
10.	ಸಾರ್ವಜನಿಕ ಆಸ್ಪತ್ರೆ	ಶ್ರೀಮಂಗಳ
11.	ಸಾರ್ವಜನಿಕ ಆಸ್ಪತ್ರೆ	ಕುಟ್ಟ
12.	ಸಾರ್ವಜನಿಕ ಆಸ್ಪತ್ರೆ	ಬೆಯ್ಸಂದಾನೆ
13.	ಸಾರ್ವಜನಿಕ ಆಸ್ಪತ್ರೆ	ಭಾಗಮಂಡಲ
14.	ಪ್ರಾಥಮಿಕ ಆರೋಗ್ಯ ಕೇಂದ್ರ	ನಾಪೋಕ್ಲು
15.	ಪ್ರಾಥಮಿಕ ಆರೋಗ್ಯ ಕೇಂದ್ರ	ಪುಡಿಕೇರಿ
16.	ಸಾರ್ವಜನಿಕ ಆಸ್ಪತ್ರೆ	ಸಂಪಾಜೆ
17.	ಪ್ರಾಥಮಿಕ ಆರೋಗ್ಯ ಕೇಂದ್ರ	ಶ್ರೀರಂಗಾಲ

ವಿಷಯ : ಮಡಿಕೇರಿ ಕೇಂದ್ರ ಕಛೇರಿ ಆಸ್ಪತ್ರೆ ಕಟ್ಟಡದ ಬಗ್ಗೆ.

ಪ್ರ. 134 (88) ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಮಾನ್ಯ, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;—

(ಅ) ಮಡಕೇರಿ ಕೇಂದ್ರ ಕಛೇರಿ ಆಸ್ಪತ್ರೆಯ ನೂತನ ಕಟ್ಟಡ ಕಟ್ಟುವ ಕೆಲಸವು ಯಾವಾಗ ಮುಗಿಯುವುದು ;

(ಆ) ಇದುವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ;

(ಇ) ಈ ಕೆಲಸ ಮುಗಿಸಲು ಎಷ್ಟು ಹಣ ಬೇಕಾಗಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು). —

(ಅ) ಈ ಕೆಲಸದ ಮೊದಲನೇ ಹಂತವನ್ನು 1985ನೇ ಜೂನ್‌ನಲ್ಲಿ ಮುಗಿಸಲು ಉದ್ದೇಶಿಸಲಾಗಿದೆ